# 4. ಆರೋಗ್ಯ (Lesson)

## I. Words meaning (ಪದಗಳ ಅರ್ಥ)

1. ಸೋಮಾರಿ = ಮೈಗಳ್ಳ (Lazy)
2. ಕೊಳಕಿ = ಅಶುದ್ಧಳು (Dirty girl)
3. ಕೆಟ್ಟವಾಸನೆ = ದುರ್ಗಂಧ (Bad Smell)
4. ಶುಚಿ = ನಿರ್ಮಲ (clean)
5. ಸಹಪಾಠಿ = ಜೊತೆಯಲ್ಲಿ ಓದುವವ (classmate)

## II. Opposite words (ವಿರುದ್ಧ ಪದಗಳು)

1. ಸೋಮಾರಿ x ಚುರುಕು
2. ಶುಚಿ x ಅಶುಚಿ
3. ಜಾಣ x ದಡ್ಡ
4. ರಾತ್ರಿ x ಹಗಲು
5. ಆರೋಗ್ಯ x ಅನಾರೋಗ್ಯ
6. ಶುದ್ಧ x ಅಶುದ್ಧ

## III. Write true/False (ಸರಿ/ತಪ್ಪು ಗುರುತಿಸಿ)

1. ಊಟ-ತಿಂಡಿಗೆ ಮೊದಲು ಸಾಬೂನಿನಿಂದ ಕೈ ತೊಳೆಯಬಾರದು. => ತಪ್ಪು
2. ರಮ್ಯಳಿಗೆ ಜ್ವರ ಕಾಣಿಸಿಕೊಳ್ಳಲಿಲ್ಲ. => ತಪ್ಪು
3. ರಮ್ಯಳಿಗೆ ತನ್ನ ತಪ್ಪಿನ ಅರಿವಾಯಿತು. => ಸರಿ
4. ದಿನದಿಂದ ದಿನಕ್ಕೆ ರಮ್ಯ ಜಾಣೆಯಾಗುತ್ತಾ ಬಂದಳು. => ಸರಿ



Scanned with CamScanner

IV. ಯಾರು, ಯಾರಿಗೆ ಹೇಳಿದರು? (Write who said this to whom)

(1) "ರಮ್ಯ ಓದಿದ ಮೇಲೆ ಪುಸ್ತಕಗಳನ್ನು ಸರಿಯಾಗಿ ಜೋಡಿಸಿ ಇಡಬೇಕು".

ಯಾರು: ರಮ್ಯಾಳ ಅಮ್ಮ, ಯಾರಿಗೆ: ರಮ್ಯಳಿಗೆ

(2) "ನೋಡಿ ಅಮ್ಮ, ನಿಮ್ಮ ಮಗಳು ಬಾಯಿ ಹಾಗೂ ದೇಹವನ್ನು ಶುಚಿಯಾಗಿ ಇಟ್ಟುಕೊಂಡಿಲ್ಲ".

ಯಾರು: ವೈದ್ಯರು, ಯಾರಿಗೆ: ರಮ್ಯಳ ಅಮ್ಮನಿಗೆ.

V. Answer the following in a sentence.

① ರಮ್ಯಳ ಜೊತೆ ಸಹಪಾಠಿಗಳು ಏಕೆ ಸೇರುತ್ತಿರಲಿಲ್ಲ?

A: ರಮ್ಯ ಕೊಳಕಿಯಾಗಿದ್ದರಿಂದ ಸಹಪಾಠಿಗಳು ಸೇರುತ್ತಿರಲಿಲ್ಲ.

② ರಮ್ಯ ಯಾರ ಮಾತು ಕೇಳುತ್ತಿರಲಿಲ್ಲ?

A: ರಮ್ಯ ಅವಳ ಅಮ್ಮನ ಮಾತು ಕೇಳುತ್ತಿರಲಿಲ್ಲ.

③ ವೈದ್ಯರು ರಮ್ಯಳ ತಾಯಿಗೆ ಏನು ಹೇಳಿದರು?

A: ವೈದ್ಯರು ರಮ್ಯಳ ತಾಯಿಗೆ – 'ನಿಮ್ಮ ಮಗಳು ಬಾಯಿ ಹಾಗೂ ದೇಹವನ್ನು ಶುಚಿಯಾಗಿ ಇಟ್ಟುಕೊಂಡಿಲ್ಲ. ಆಹಾರದ ಮೂಲಕ ಕ್ರಿಮಿ ಕೀಟಗಳು ದೇಹವನ್ನು ಸೇರಿ ಜ್ವರ ಬಂದಿದೆ' ಎಂದು ಹೇಳಿದರು.

④ ರಮ್ಯಳಿಗೆ ಯಾರು ಸ್ನೇಹಿತರಾದರು?

A: ರಮ್ಯಳಿಗೆ ದೂರ ಸರಿದಿದ್ದ ಅವಳ ಸಹಪಾಠಿಗಳೆಲ್ಲಾ ಸ್ನೇಹಿತರಾದರು.

==0==



Scanned with CamScanner